


ಒಂದು ಹಳ್ಳಿಯಲ್ಲಿ ದೊಡ್ಡದಾದ ನೀರಿನ ಹೊಂಡವಿತ್ತು. ಅದರಲ್ಲಿ ನೂರಾರು ಕಪ್ಪೆಗಳು ವಾಸವಾಗಿದ್ದವು. ಕೆಲವು ಸಾಧು ಸ್ವಭಾವದ ಕಪ್ಪೆಗಳಿದ್ದರೆ ಇನ್ನು ಕೆಲವು ದುಷ್ಟಬುದ್ಧಿಯ ಕಪ್ಪೆಗಳಿದ್ದವು. ಈ ದುಷ್ಟಬುದ್ಧಿಯ ಕಪ್ಪೆಗಳು ವಿನಾಕಾರಣ ಸಾಧು ಕಪ್ಪೆಗಳ ಜೊತೆಗೆ ಕಾಲು ಕೆರೆದುಕೊಂಡು ಜಗಳವಾಡುತ್ತಿದ್ದವು. ಇದಕ್ಕೆ ದುಷ್ಟಬುದ್ಧಿಯ ಕಪ್ಪೆಗಳಿಗೆ ಮುಖಂಡನಂತೆ ವರ್ತಿಸುವ ಕಪ್ಪೆಯೊಂದಿತ್ತು. ಅದು ಗರ್ವದಿಂದ ಮೆರೆಯುತ್ತಿತ್ತು. ಕೆಲವು ದಿನಗಳಲ್ಲೇ ಅದಕ್ಕೊಂದು ಹಾವಿನ ಪರಿಚಯವಾಯಿತು. ಅದು ಹಾವಿಗೆ, 'ಏನಾದರೂ ಮಾಡಿ ನೀನು ನನ್ನ ಶತ್ರುಕಪ್ಪೆಗಳನ್ನೆಲ್ಲಾ ತಿಂದು ಹಾಕಬೇಕು' ಎಂದು ಕೇಳಿಕೊಂಡಿತು. ಆಗ ಹಾವು, 'ಹಾಗೇ ಆಗಲಿ! ಆದರೆ ನಾನು ನಿನ್ನ ಶತ್ರುಗಳನ್ನೆಲ್ಲಾ ತಿನ್ನಬೇಕಾದರೆ ಅದಕ್ಕೆ ತಕ್ಕ ಹಾಗೆ ನೀನು ನನಗೆ ಏನಾದರೂ ಕಾಣಿಕೆ ನೀಡಬೇಕು' ಎಂದಿತು. ಅದಕ್ಕೆ ಮುಖಂಡ ಕಪ್ಪೆ ಮುಂದು ಯೋಚಿಸದೆ ಅದರ ಶರತ್ತಿಗೆ ಒಪ್ಪಿಗೆ ನೀಡಿತು.

ಹಾವಿಗೆ ಅಷ್ಟೇ ಸಾಕಾಯಿತು. ಮಾರನೆಯ ದಿನದಿಂದಲೇ ಅದು ಒಂದೊಂದಾಗಿ ಸಾಧು ಸ್ವಭಾವದ ಕಪ್ಪೆಗಳನ್ನೆಲ್ಲಾ ತಿನ್ನುತ್ತ ಬಂದಿತು. ನಂತರ ಉಳಿದದ್ದು ದುಷ್ಟಕಪ್ಪೆಗಳು ಮತ್ತು ಅವುಗಳ ಮುಖಂಡ ಕಪ್ಪೆ. ಅದು ಮುಖಂಡ ಕಪ್ಪೆಯನ್ನು ಕುರಿತು– 'ನೀನು ಹೇಳಿದಂತೆ ನಿನ್ನ ಶತ್ರು ಕಪ್ಪೆಗಳನ್ನೆಲ್ಲಾ ತಿಂದು ಮುಗಿಸಿದ್ದೇನೆ. ನೀನು ಈಗ ನಿನ್ನ ಮಾತಿನಂತೆ ನನಗೆ ಕಾಣಿಕೆ ನೀಡಬೇಕು. ಹಾಗಾಗಿ ನಾನು ನಿನ್ನನ್ನೂ ಮತ್ತು ನಿನ್ನ ಹಿಂಬಾಲಕರನ್ನೂ ತಿನ್ನುವ ಸಮಯ ಈಗ ಬಂದಿದೆ' ಎಂದು ಹೇಳಿ ಒಂದೊಂದಾಗಿ ಉಳಿದ ಕಪ್ಪೆಗಳನ್ನೆಲ್ಲಾ ತಿಂದು ಹಾಕಿತು. ಹೀಗೆ 'ಇಬ್ಬರ ಜಗಳ ಮೂರನೆಯವನಿಗೆ ಲಾಭ ಎನ್ನುವಂತೆ' ಹಾವು ಆ ಹೊಂಡದಲ್ಲಿದ್ದ ಎಲ್ಲಾ ಕಪ್ಪೆಗಳನ್ನೂ ತಿಂದು ತೃಪ್ತಿಯಿಂದ ಬೀಗಿತು.